# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಅಂಕೋಲಾ.

ಸಿ.ಸಿ.ನಂ. 785/2018

**ಫಿರ್ಯಾದುದಾರರು:** ಗಜಾನನ ಗಣಪತಿ ನಾಯ್ಕ

ವಿರುದ್ಧ

**ಆರೋಪಿ** : ಎಂ.ಲಿಂಗರಾಜು

## ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರೀತ್ಯಾ ಆರೋಪಿಯ ಹೇಳಿಕೆಃ

ಪ್ರ.1 . ನೀವು ಫಿರ್ಯಾದಿ ಪರ ಸಾಕ್ಷ್ಯವನ್ನು ಕೇಳಿದ್ದೀರಾ?
ಉತ್ತರಃ ಕೇಳಿಕೊಂಡಿರುತ್ತೇನೆ
ಪ್ರ.2 . ಫ್ರಾ.ಸಾ.1 ರವರು ತಮ್ಮ ಸಾಕ್ಷ್ಯದಲ್ಲಿ ನೀವು ಆರೋಪಿಯ ಸ್ನೇಹಿತನಾಗಿದ್ದು, ದಿನಾಂಕ 10-06-2016 ರಂದು ಅವರಲ್ಲಿ ಬಂದು ಭಟ್ಕಳ ತಾಲೂಕಿನ ಮುರ್ಡೆಶ್ವರ ಗ್ರಾಮದಲ್ಲಿ ಒಂದು ಜಮೀನನ್ನು ಖರೀದಿಸುವ ಬಗ್ಗೆ ಚಿಂತನೆ ನಡೆಸಿ ಅದರ ಖರೀದಿಗಾಗಿ ಅದರ ಮಾಲೀಕರಿಗೆ ರೂ.1,50,000-00 ಮುಂಗಡವಾಗಿ ನೀಡಿ ಆ ಸಂಬಂಧ ರೂ.13,50,000-00 ನೀಡುವುದು ಬಾಕಿ ಇದ್ದು, ನಿಗದಿತ ಅವಧಿಯಲ್ಲಿ ಬಾಕಿ ಹಣವನ್ನು ಪಾವತಿಸಲು ಹಣಕಾಸಿನ ತೊಂದರೆ ಅನುಭವಿಸುತ್ತಿರುವುದಾಗಿಯೂ ಮತ್ತು ಈಗಾಗಲೇ ರೂ.3,00,000/- ಕುಡಿಸಿಕೊಂಡಿರುವುದಾಗಿ ಹಾಗೂ ಬಾಕಿ ರೂ.9,00,000/- ಹೊಂದಿಸಿಕೊಳ್ಳಲು ಅಸಾಧ್ಯವಾಗಿದ್ದು, ಅಷ್ಟು ಹಣ ನೀಡಿದಲ್ಲಿ ಜಮೀನನ್ನು ಅವರ ಹೆಸರಿಗೆ ಮಾಡುವುದಾಗಿ ವಾಗ್ದಾನ ಮಾಡಿದ್ದೀರಿ ಎಂದು ನುಡಿದಿರುತ್ತಾರೆ, ಅದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರಃಸುಳ್ಳು

ಪ್ರ.3 . ಫ್ರಾ.ಸಾ.1 ರವರು ತಮ್ಮ ಸಾಕ್ಷ್ಯದಲ್ಲಿ ಪ್ರವಾಸೋದ್ಯಮದಲ್ಲಿ ಮುಂದುವರಿರುವ ಮುರ್ಡೆಶ್ವರ ಗ್ರಾಮದಲ್ಲಿ ವ್ಯವಹಾರ ಮಾಡಲು ಉತ್ಸುಕವಾಗಿದ್ದ ಅವರು ಅದಕ್ಕೆ ಒಪ್ಪಿ ನಿಮಗೆ ದಿನಾಂಕ 18-06-2016 ರಂದು ರೂ.9,00,000/- ವನ್ನು ನೀಡಿದ್ದು ಹಾಗೂ ಆ ಹಣವನ್ನು ಅವರ 6 ಜನ ಸಹೋದರರಿಂದ ಭಾಗಾಶಃ ಪಡೆದು ಹಾಗೂ ಹೊನ್ನಾವರ ತಾಲೂಕಿನ ಮಹಿಮೆ ಗ್ರಾಮದಲ್ಲಿ ಇರುವ ತೋಟದ ಕೃಷಿ ಉತ್ಪನ್ನದಿಂದ ಬಂದ ಹಣದಿಂದ ನೀಡಿದ್ದು ಎಂದು ನುಡಿದಿರುತ್ತಾರೆ, ಅದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರಃಸುಳ್ಳು

ಪ್ರ.4 . ಫ್ರಾ.ಸಾ.1 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಸದರಿ ಹಣವನ್ನು 3 ತಿಂಗಳೊಳಗೆ ಪಾವತಿಸುವುದಾಗಿ, ತಪ್ಪಿದ್ದಲ್ಲಿ ಮುರ್ಡೆಶ್ವರದಲ್ಲಿ ಖರೀದಿಸಿರುವ ಜಮೀನನ್ನು ಅವರಿಗೆ ನೀವು ಮಾರಾಟ ಮಾಡುವುದಾಗಿ ತಿಳಿಸಿದ್ದು ಇರುತ್ತದೆ ಹಾಗೂ 3 ತಿಂಗಳಾದ ನಂತರ ಸದರಿ ಹಣವನ್ನು ವಾಪಾಸು ನೀಡಲು ಕೇಳಿಕೊಂಡಾಗ ನೀವು ಜಮೀನಿನ ಮಾಲೀಕರು ನಿಮ್ಮ ಹೆಸರಿಗೆ ಮಾಡಿಕೊಡಲು ಒಪ್ಪಿದೆ ಇದ್ದ ಕಾರಣ ಅವರು ಭಾಗಾಶಃ ಹಣವನ್ನು ವಾಪಾಸು ನೀಡಿದ್ದು, ಉಳಿದ ಸ್ವಲ್ಪ ಹಣ ಬಾಕಿ ಇರುತ್ತದೆ ಮತ್ತು ಸದರಿ ಹಣ ಬ್ಯಾಂಕನಲ್ಲಿ ನಿಮ್ಮ ಖಾತೆಯಲ್ಲಿ ಜಮಾ ಇದೆ ಹಾಗೂ ನೀವು ಚಕ್ ನೀಡುವುದಾಗಿ ಹೇಳಿದಿರಿ ಎಂದು ನುಡಿದಿರುತ್ತಾರೆ, ಅದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರಃಸುಳ್ಳು

ಸಿ.ಸಿ.ನಂ. 785/2018

ಪ್ರ.5 . ಫ್ರಾ.ಸಾ.1 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದರಂತೆ ನೀವು ನಿಮ್ಮ ಸಿಂಡಿಕೇಟ್ ಬ್ಯಾಂಕ್, ಮಲ್ಲಾಪುರ ಶಾಖೆಯ ದಿನಾಂಕ 13-10-2016 ರ ಚಕ್ ಸಂಖ್ಯೆ 373586 ನ್ನು ನೀಡಿ ಖಾತೆಯಲ್ಲಿ ಸಾಕಷ್ಟು ಹಣ ಇದೆ ಎಂದು ತಿಳಿಸಿದ್ದೀರಿ ಎಂದು ನುಡಿದಿರುತ್ತಾರೆ, ಅದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರಃಸುಳ್ಳು

ಪ್ರ.6 ಫ್ರಾಸಾ.1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ಸದರಿ ಚಕ್ ನ್ನು ನಗದಿಕರಣಕ್ಕಾಗಿ ವಿಜಯಾ ಬ್ಯಾಂಕ್ , ಅಂಕೋಲಾ ಶಾಖೆ ಸಲ್ಲಿಸಿದಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ ಎಂದು ದಿನಾಂಕ 06-12-2016 ರ ಬ್ಯಾಂಕ ಹಿಂಬರಹದೊಂದಿಗೆ ವಾಪಾಸು ಬಂದಿರುತ್ತದೆ ಎಂದು ನುಡಿದಿರುತ್ತಾರೆ, ಅದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರಃಸುಳ್ಳು

ಪ್ರ.7 ಫ್ರಾಸಾ.1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ನಿಮಗೆ ಸಾಲವನ್ನು 15 ದಿವಸದೊಳಗೆ ಮರುಪಾವತಿ ಮಾಡುವಂತೆ ದಿನಾಂಕ 19-12-2016 ರಂದು ವಕೀಲರ ಮೂಲಕ ರಜಿಸ್ಟರ ನೋಟಿಸನ್ನು ನೀಡಿದ್ದು , ನೀವು ಸದರಿ ನೋಟಿಸನ್ನು ದಿನಾಂಕ 22-12-2016 ರಂದು ಸ್ವೀಕರಿಸಿ ನಿಮ್ಮ ವಕೀಲರ ಮೂಲಕ ಸುಳ್ಳು ಮಜಕೂರಿನ ಪ್ರತ್ಯುತ್ತರ ನೋಟಿಸ ದಿನಾಂಕ 30-12-2016 ರಂದು ನೀಡಿರುತ್ತೀರಿ ನಿಗದಿತ ಅವದಿಯೊಳಗೆ ಚಕ್‌ನ ಹಣವನ್ನು ಪಾವಸಿರುವುದಿಲ್ಲ ಎಂದು ನುಡಿದಿರುತ್ತಾರೆ, ಅದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರಃಸುಳ್ಳು

ಪ್ರ.8 ನಿಮ್ಮ ಪರವಾಗಿ ಸಾಕ್ಷಿದಾರರು ಇದ್ದಾರೆಯೇ ?
ಉತ್ತರಃ ಇದೆ

ಪ್ರ.9 ನಿಮ್ಮ ಪರವಾಗಿ ಏನಾದರೂ ಹೇಳುವುದು ಇದೇಯೇ ?
ಉತ್ತರಃ ಇಲ್ಲ

( ಆರೋಪಿತರಿಗೆ ಮೇಲಿನ ಪ್ರಶ್ನೆಗಳನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಲಾಗಿ, ಅವರು ಕೊಟ್ಟಿರುವ ಉತ್ತರವನ್ನೇ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು.)

ನಾಂಕಃ23-06-2022

(ಮನೋಹರ ಎಂ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.